**ಪಾಠ–2** **ಏಪ್ರಿಲ್ 3–9**

# ಒಡಂಬಡಿಕೆ–ತಾಳಿಕೆ ಬಾಳಿಕೆಯ ಲೇಪನ (ಪ್ರೈಮರ್)



**ಸಬ್ಬತ್ತಿನ ಮಧ್ಯಾಹ್ನ :** ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ : ಆ.ಕಾಂಡ 9:15; ಯೆಶಾಯ 54:9, ಆ.ಕಾಂಡ 12:1–3, ಗಲಾತ್ಯ 3:6–9, 29, ವಿ.ಕಾಂಡ 6:1–8, ಯೆರೆಮೀಯ 31:33–34.

**ಸ್ಮರಣವಾಕ್ಯ : "ಹೀಗಿರಲಾಗಿ ನೀವು ನನ್ನ ಮಾತನ್ನು ಶ್ರದ್ಧೆಯಿಂದ ಕೇಳಿ ನಾನು ಮಾಡುವ ನಿಬಂಧನೆಯನ್ನು ಅನುಸರಿಸಿ ನಡೆದರೆ ನೀವು ಎಲ್ಲಾ ಜನಾಂಗಗಳಲ್ಲಿ ನನಗೆ ಸ್ವಕೀಯಜನರಾಗುವಿರಿ; ಸಮಸ್ತ ಭೂಮಿಯೂ ನನ್ನದಷ್ಟೆ; ನೀವು ನನಗೆ ಯಾಜಕರಾಜ್ಯವೂ ಪರಿಶುದ್ಧ ಜನರೂ ಆಗಿರುವಿರಿ"** (ವಿ.ಕಾಂಡ 19:5).

ಕಳೆದ ವಾರ ನಮ್ಮ ಮೊದಲ ತಂದೆ–ತಾಯಿಗಳ ಪಾಪದ ದೆಸೆಯಿಂದ ಇಡೀ ಮಾನವ ಜನಾಂಗವು ಬಿದ್ದುಹೋದುದನ್ನು ಕಲಿಯುವುದರೊಂದಿಗೆ ಆ ಪಾಠವನ್ನು ನಿಲ್ಲಿಸಿದ್ದೆವು. ಈ ವಾರದ ಇಡೀ ತ್ರೈಮಾಸಿಕದಲ್ಲಿರುವ ಪಾಠಗಳ ಸಾರಾಂಶವನ್ನು ಕಲಿಯುತ್ತೇವೆ. ದೇವರು ಮಾನವ ಜನಾಂಗದೊಡನೆ ಆಯಾ ಕಾಲದಲ್ಲಿ ಮಾಡಿಕೊಂಡ ಒಡಂಬಡಿಕೆಗಳ ಬಗ್ಗೆ ಪ್ರತಿದಿನವೂ ಕಲಿಯುತ್ತಾ ಹೋಗುತ್ತೇವೆ. ಈ ಎಲ್ಲಾ ಒಡಂಬಡಿಕೆಗಳೂ ಕಲ್ವಾರಿಯಲ್ಲಿ ಯೇಸುಕ್ರಿಸ್ತನ ರಕ್ತದಿಂದ ಸ್ಥಿರಮಾಡಲ್ಪಟ್ಟ, ಕ್ರೈಸ್ತರಾಗಿ ನಾವು ಕರ್ತನಲ್ಲಿ ಪ್ರವೇಶಿಸಲು ಅನುವು ಮಾಡಿಕೊಟ್ಟ ಒಡಂಬಡಿಕೆಯ ಸತ್ಯಾಂಶವನ್ನೇ ತಮ್ಮದೇ ಆದ ರೀತಿಯಲ್ಲಿ ವ್ಯಕ್ತಪಡಿಸುತ್ತವೆ.

---

* ಏಪ್ರಿಲ್ 10ರ ಸಬ್ಬತ್ತಿನ ಸಿದ್ಧತೆಗಾಗಿ ಈ ವಾರದ ಪಾಠವನ್ನು ಅಧ್ಯಯನ ಮಾಡಿರಿ.

ದೇವರು ನೋಹನನ್ನೂ ಆತನ ಕುಟುಂಬವನ್ನೂ ನಾಶದಿಂದ ತಪ್ಪಿಸಲು ಮಾಡಿಕೊಂಡ ಒಡಂಬಡಿಕೆಯೊಂದಿಗೆ ಪ್ರಾರಂಭಿಸುತ್ತೇವೆ. ನಂತರ ಅಬ್ರಹಾಮನ ಜೊತೆ ಮಾಡಿಕೊಂಡ ನಮ್ಮೆಲ್ಲರಿಗೂ ವಾಗ್ದಾನಭರಿತವಾದ ಮತ್ತು ಸಮೃದ್ಧವಾದ ಒಡಂಬಡಿಕೆಯ ಬಗ್ಗೆ ಕಲಿಯುತ್ತಾ ಮುಂದೆ ಸಾಗುತ್ತೇವೆ. ಇದಾದಮೇಲೆ ಸೀನಾಯಿ ಬೆಟ್ಟದಲ್ಲಿ ಮುಖ್ಯವಾದದ್ದನ್ನು ಘೋಷಿಸುವ ಒಡಂಬಡಿಕೆಯ ಬಗ್ಗೆ ತಿಳಿದುಕೊಳ್ಳುತ್ತೇವೆ; ಕಡೆಯದಾಗಿ ಈ ಎಲ್ಲಾ ಒಡಂಬಡಿಕೆಗಳು ಒಟ್ಟಾಗಿ ಸೂಚಿಸುವ "ಹೊಸ ಒಡಂಬಡಿಕೆ"ಯ ಬಗ್ಗೆ ಗಮನಹರಿಸುತ್ತೇವೆ. ಈ ಎಲ್ಲಾ ಒಡಂಬಡಿಕೆಗಳನ್ನು ಅವಶ್ಯವಾಗಿ ಮುಂದಿನ ಕೆಲವು ವಾರಗಳು ಹೆಚ್ಚು ಆಳವಾಗಿ ಕಲಿಯುತ್ತೇವೆ. ಈ ವಾರ ಕೇವಲ ಅವುಗಳ ಒಂದು ಮುನ್ನೋಟವನ್ನು ನೋಡುತ್ತೇವೆ.

**ಪಾಠದ ಕಿರುನೋಟ:** ಒಡಂಬಡಿಕೆ ಎಂಬ ಪದದ ಅರ್ಥವೇನು? ಯಾವ ಅಂಶಗಳಿಂದ ಒಡಂಬಡಿಕೆಯಾಗುತ್ತದೆ? ನೋಹನೊಂದಿಗೆ ದೇವರು ಮಾಡಿಕೊಂಡ ಒಡಂಬಡಿಕೆ ಯಾವುದು?

ಅಬ್ರಹಾಮನೊಂದಿಗೆ ಮಾಡಿಕೊಂಡ ಒಡಂಬಡಿಕೆಯಲ್ಲಿ ಯಾವ ನಿರೀಕ್ಷೆಯನ್ನು ಕಂಡುಕೊಳ್ಳುತ್ತೇವೆ? ನಂಬಿಕೆ ಮತ್ತು ಕ್ರಿಯೆಗಳು ಮನುಷ್ಯಪಕ್ಷವಾದ ಒಡಂಬಡಿಕೆಯಲ್ಲಿ ಯಾವ ಪಾತ್ರವನ್ನು ವಹಿಸುತ್ತವೆ? ಒಡಂಬಡಿಕೆಯು ಕೇವಲ ಒಂದು ವ್ಯವಹಾರವೋ ಅಥವಾ ಸಂಬಂಧದ ಅಂಶಗಳನ್ನೂ ಸಹಾ ಹೊಂದಿರುವುದೋ? "ಹೊಸ ಒಡಂಬಡಿಕೆ"ಯ ಸಾರವೇನು?

**ಭಾನುವಾರ** **ಏಪ್ರಿಲ್ 4**

## ಒಡಂಬಡಿಕೆಯ ಮೂಲಾಂಶಗಳು

ಕನ್ನಡದಲ್ಲಿ "ಒಡಂಬಡಿಕೆ" ಎಂಬುದಾಗಿ ಅನುವಾದಗೊಂಡಿರುವ "ಬೆರಿತ್" ಎಂಬ ಇಬ್ರಿಯಪದವು ಹಳೆಯ ಒಡಂಬಡಿಕೆಯಲ್ಲಿ ಸುಮಾರು 287ಸಲ ಕಾಣಿಸಿಕೊಂಡಿವೆ. ಇದನ್ನು ಒಪ್ಪಂದ ಅಥವಾ ಅಂತಿಮ ಉಯಿಲು ಎಂಬುದಾಗಿಯೂ ಸಹಾ ಅನುವಾದಿಸಬಹುದು. ಇದರ ಮೂಲವು ಅಸ್ಪಷ್ಟವಾಗಿದೆ. ಇದಕ್ಕೆ ಎರಡುಪಕ್ಷಗಳನ್ನು ಬೆಸೆಯುವ ಬಂಧನ ಎಂಬ ಅರ್ಥ

ಬರುತ್ತದೆ. ಮನುಷ್ಯ ಮನುಷ್ಯರ ನಡುವೆ ಮತ್ತು ಮನುಷ್ಯ ದೇವರ ನಡುವೆ ನಡೆಯುವ ವಿವಿಧವಾದ ಒಪ್ಪಂದಗಳಿಗೆ ಈ ಪದವು ಉಪಯೋಗವಾಗಿದೆ. ಎರಡೂ ಪಕ್ಷಗಳು ಮನುಷ್ಯರಾಗಿರುವಾಗ ಮತ್ತು ಮನುಷ್ಯರ ಜೊತೆ ದೇವರು ಮಾಡಿಕೊಳ್ಳುವ ಧಾರ್ಮಿಕ ಒಪ್ಪಂದಗಳಿಗೂ ಈ ಪದವು ಸಮಾನವಾಗಿ ಉಪಯೋಗವಾಗಿದೆ. ಈ ಸಾಮಾನ್ಯ ಉಪಯೋಗದ ಆಧಾರದ ಮೇಲೆ ಧಾರ್ಮಿಕ ವಿಷಯದಲ್ಲಿ ನಿಜಕ್ಕೂ ರೂಪಕಲಾಂಕಾರದಲ್ಲಿ ಆಳವಾದ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿದೆ– ಜೆ. ಆರ್ಥರ್ ಥಾಮ್ಸನ್.

ಸತ್ಯವೇದದಲ್ಲಿ ವೈವಾಹಿಕ ಒಡಂಬಡಿಕೆಯಂತೆಯೇ ಇತರ ಒಡಂಬಡಿಕೆಗಳು ಸಂಬಂಧ ಮತ್ತು ಏರ್ಪಾಟು ಎರಡನ್ನೂ ವ್ಯಾಖ್ಯಾನಿಸುತ್ತವೆ.

ಸತ್ಯವೇದದ ಒಡಂಬಡಿಕೆಯು ಒಂದು ಏರ್ಪಾಟಾಗಿ ಈ ಕೆಳಗೆ ಕೊಟ್ಟಿರುವ ಮೂಲಾಂಶಗಳನ್ನು ಹೊಂದಿರುತ್ತದೆ.

1. ಒಡಂಬಡಿಕೆಯ ವಾಗ್ದಾನವನ್ನು ದೇವರು ಪ್ರಮಾಣ ಮಾಡುವುದರ ಮೂಲಕ ಅದನ್ನು ದೃಢೀಕರಿಸುತ್ತಾನೆ (ಗಲಾತ್ಯ 3:16, ಇಬ್ರಿಯ 6:13,17).
2. ದಶಾಜ್ಞೆಗಳಲ್ಲಿ ವ್ಯಕ್ತವಾಗಿರುವ ದೇವರಚಿತ್ತಕ್ಕೆ ವಿಧೇಯರಾಗುವುದು ಒಡಂಬಡಿಕೆಯ ಕರ್ತವ್ಯವಾಗಿದೆ (ಧ.ಕಾಂಡ 4:13).
3. ದೇವರ ಒಡಂಬಡಿಕೆಯ ಹೊಣೆಗಾರಿಕೆ (ಕರ್ತವ್ಯ) ಅಂತಿಮವಾಗಿ ಕ್ರಿಸ್ತನ ಮತ್ತು ರಕ್ಷಣೆಯ ಮುಖಾಂತರವಾಗಿ ನೆರವೇರುತ್ತದೆ (ಯೆಶಾಯ 42:1,6).

ಮೇಲೆ ಪಟ್ಟಿ ಮಾಡಿರುವ ಮೂರು ಅಂಶಗಳನ್ನು ಗಮನಿಸಿರಿ (ದೇವರ ಒಡಂಬಡಿಕೆಗಳು, ನಮ್ಮ ವಿಧೇಯತೆ, ರಕ್ಷಣಾ ಯೋಜನೆ) ನೀವು ದೇವರೊಂದಿಗೆ ನಡೆಯುವಾಗ ಈ ಅಂಶಗಳು ನಿಮ್ಮ ಜೀವಿತದಲ್ಲಿ ಕಾರ್ಯಗತವಾಗಿರುವುದನ್ನು ಹೇಗೆ ಕಂಡುಕೊಂಡಿರುವಿರಿ?

ನಿಮ್ಮ ಸ್ವಂತ ಜೀವಿತದಲ್ಲಿ ಇವುಗಳು ವ್ಯಕ್ತಪಟ್ಟಿರುವುದನ್ನು ಏಳೆಂಟು ವಾಕ್ಯಗಳಲ್ಲಿ ವಿವರಿಸಿ ಬರೆಯಿರಿ.

ಹಳೆಯ ಒಡಂಬಡಿಕೆಯ ದೇವದರ್ಶನ ಗುಡಾರದಲ್ಲಿ ಕ್ರಿಸ್ತನನ್ನು ಪ್ರತಿನಿಧಿಸುವ ಯಜ್ಞ ವ್ಯವಸ್ಥೆಯು ಜನರಿಗೆ ಇಡೀ ರಕ್ಷಣಾಯೋಜನೆಯ ಬಗ್ಗೆ ಬೋಧಿಸುತ್ತಿದ್ದವು. ರಕ್ಷಣಾ ಯೋಜನೆಯನ್ನು ಪ್ರತಿಬಿಂಬಿಸುವ ಸಂಕೇತಗಳ ಮೂಲಕ ಇಸ್ರಾಯೇಲ್ಯರು ಮತ್ತು ಅವರ ಪೂರ್ವಿಕರು ಬರುವುದಕ್ಕಿದ್ದ ವಿಮೋಚನಲ್ಲಿ ಇಟ್ಟಿರುವ ವಿಶ್ವಾಸವನ್ನು ವ್ಯಕ್ತಪಡಿಸುತ್ತಿದ್ದರು.

ಈ ಧಾರ್ಮಿಕ ಆಚರಣೆಗಳ ಮೂಲಕ ಪಾಪದಿಂದ ಪರಿತಪಿಸುವ ಪಾಪಿಯೊಬ್ಬನು ಕ್ಷಮಾಪಣೆ ಹೊಂದಿ ತಪ್ಪಿತಸ್ಥಭಾವದಿಂದ ಬಿಡುಗಡೆ ಹೊಂದಿಕೊಳ್ಳುತ್ತಿದ್ದನು. ಒಂದು ವೇಳೆ ಮಾನವರು ಒಪ್ಪಂದದ ಪ್ರಕಾರ ನಡೆದುಕೊಳ್ಳುವುದರಲ್ಲಿ ವಿಫಲರಾದಾಗ್ಯೂ ಆಧ್ಯಾತ್ಮಿಕ ಉನ್ನತಿಗೆ ಮತ್ತು ದೇವರ ಸಾರೂಪ್ಯಕ್ಕೆ ಮಾರ್ಪಾಟು ಹೊಂದುವ ಅವಕಾಶಗಳು ಈ ಆಚರಣೆಗಳ ಮೂಲಕ ಮುಂದುವರೆದುಕೊಂಡು ಹೋಗುತ್ತಿದ್ದವು. ಈ ರೀತಿಯಾಗಿ ಒಡಂಬಡಿಕೆಯ ಅನುಸಾರವಾಗಿ ದೊರಕುವ ಆಶೀರ್ವಾದಗಳನ್ನು ಉಳಿಸಿಕೊಳ್ಳಬಹುದಾಗಿತ್ತು.

ಮನುಷ್ಯರ ನಡುವೆ ಅನೇಕ ಒಪ್ಪಂದಗಳು ಏರ್ಪಾಟ್ಟಾಗ್ಯೂ ಇಬ್ರಿಯ ಬೈಬಲ್‌ನಲ್ಲಿ "ಬೆರಿತ್" ಎಂಬ ಪದವು ಮುಖ್ಯವಾಗಿ ದೇವರು ಮತ್ತು ಮನುಷ್ಯರ ನಡುವಿನ ಸಂಬಂಧದ ಬಗ್ಗೆ ವ್ಯವಹರಿಸುತ್ತದೆ.

ದೇವರು ಯಾರು ಮತ್ತು ಆತನಿಗೆ ಹೋಲಿಸಿಕೊಂಡಾಗ ಮನುಷ್ಯರಾದ ನಾವು ಎಷ್ಟರವರು ಎಂಬುದನ್ನು ಪರಿಗಣಿಸಿಕೊಂಡಾಗ ಇವರ ನಡುವೆ ಏರ್ಪಟ್ಟ ಒಡಂಬಡಿಕೆಯು ಎಂತಹ ಸಂಬಂಧವನ್ನು ನಿರೂಪಿಸುತ್ತದೆ?

**ಸೋಮವಾರ** **ಏಪ್ರಿಲ್ 5**

## ನೋಹನ ಜೊತೆಗೆ ಮಾಡಿಕೊಂಡ ಒಡಂಬಡಿಕೆ

"ಆದರೆ ನಿನ್ನ ಕೂಡ ನನ್ನ ನಿಬಂಧನೆಯನ್ನು ಮಾಡುತ್ತೇನೆ. ನೀನು ಹೆಂಡತಿ ಮಕ್ಕಳು ಸೊಸೆಯರ ಸಹಿತವಾಗಿ ನಾವೆಯಲ್ಲಿ ಸೇರಬೇಕು" (ಆ.ಕಾಂಡ 6:8).

ಮೇಲಿನ ವಚನವು ಭೂಮಿಯ ಮೇಲೆ ಮಿತಿಮೀರಿ ಹೆಚ್ಚುತ್ತಿರುವ ತೀವ್ರತರವಾದ ಪಾಪಗಳ ನಿಮಿತ್ತ ದೇವರು ಲೋಕವನ್ನು ನಾಶಮಾಡಲು ನಿರ್ಧರಿಸಿರುವುದಾಗಿ ದೇವರು ನೋಹನಿಗೆ ಹೇಳುವ ಸಂದರ್ಭದಲ್ಲಿ ಮೊಟ್ಟ

ಮೊದಲಿಗೆ ಒಡಂಬಡಿಕೆ ಎಂಬ ಪದವು ಸತ್ಯವೇದದಲ್ಲಿ ಕಾಣಿಸಿಕೊಂಡಿದೆ.

ನಾಶವು ಇಡೀ ಲೋಕಕ್ಕೆ ಜಲಪ್ರಳಯದ ರೂಪದಲ್ಲಿ ಬರುತ್ತಿದ್ದಾಗ್ಯೂ ದೇವರು ತಾನು ಉಂಟುಮಾಡಿದ ಲೋಕವನ್ನು ಎಂದಿಗೂ ಕೈಬಿಡಲಾರನು. ಮನುಷ್ಯನು ಪಾಪದಲ್ಲಿ ಬಿದ್ದನಂತರ ಒಡಂಬಡಿಕೆಯ ಮೂಲಕ ಸಂಬಂಧವನ್ನು ಮುಂದುವರೆಸಿಕೊಂಡು ಹೋಗುವ ಅವಕಾಶವನ್ನು ಕೊಟ್ಟನು. ನಾನು ನಿಮ್ಮೊಂದಿಗೆ ನಿಬಂಧನೆಯನ್ನು ಮಾಡಿಕೊಳ್ಳುತ್ತೇನೆಂದು ತಾನಾಗಿಯೇ ಅವಕಾಶ ನೀಡಿದಾತನ 'ನಾನು' ಎಂಬ ದೈವ ನುಡಿಯು ನೋಹನಿಗೆ ಭದ್ರನೆಲೆಯಾಗಿತ್ತು. ಒಡಂಬಡಿಕೆಯನ್ನು ಪಾಲಿಸುವವನಾಗಿ ಕರ್ತನು ತನ್ನೊಡನೆ ಮಾಡಿಕೊಂಡ ನಿಬಂಧನೆಗೆ ಬದ್ಧವಾಗಿ ನಡೆದುಕೊಂಡು ವಿಧೇಯನಾಗುವುದರ ಮೂಲಕ ಸಂಬಂಧವನ್ನು ಉಳಿಸಿಕೊಳ್ಳಲು ಸಿದ್ಧರಾಗಿದ್ದ ನೋಹನ ಕುಟುಂಬದ ಸದಸ್ಯರನ್ನು ಸಂರಕ್ಷಿಸುವುದಕ್ಕೆ ವಾಗ್ದಾನ ಮಾಡಿದನು.

ನೋಹನ ಜೊತೆ ಮಾಡಿಕೊಂಡ ವಾಗ್ದಾನವು ಕೇವಲ ಏಕಪಕ್ಷೀಯವಾದುದೇ? ಒಡಂಬಡಿಕೆಯ ಆಲೋಚನೆಯು ಒಂದಕ್ಕಿಂತ ಹೆಚ್ಚು ಪಕ್ಷಗಳ ನಡುವೆ ನಡೆಯುವಂಥದ್ದನ್ನು ಸೂಚಿಸುತ್ತದೆಯೆಂದು ನೆನಪು ಮಾಡಿಕೊಳ್ಳಿರಿ. ನೋಹನು ಒಡಂಬಡಿಕೆಯನುಸಾರ ತನ್ನ ಕರ್ತವ್ಯವನ್ನು ಎತ್ತಿಹಿಡಿದನೇ? ಈ ಪ್ರಶ್ನೆಗಳಿಗೆ ಉತ್ತರ ಕೊಡುವಾಗ ನಮಗೆ ಯಾವ ಪಾಠಗಳು ಸಿಗುತ್ತವೆ?

ದೇವರು ನೋಹನಿಗೆ ಲೋಕವು ಜಲಪ್ರಳಯದಿಂದ ನಾಶವಾಗುತ್ತದೆ ಎಂದು ಹೇಳುತ್ತಾನೆ. ಆದರೆ ದೇವರು ಆತನೊಂದಿಗೆ ಒಂದು ಒಪ್ಪಂದ ಮಾಡಿಕೊಳ್ಳುತ್ತಾನೆ. ಅದರಂತೆ ತಾನು ನೋಹನನ್ನು ಆತನ ಕುಟುಂಬದವರನ್ನು ರಕ್ಷಿಸುವುದಾಗಿ ವಾಗ್ದಾನ ಮಾಡುತ್ತಾನೆ. ಹಾಗಾಗಿ ದೇವರು ಒಡಂಬಡಿಕೆಯ ಪ್ರಕಾರ ತನ್ನ ಕರ್ತವ್ಯವನ್ನು ಮಾಡದಿದ್ದರೆ ನೋಹನು ಏನೇ ಮಾಡಿದರೂ ಲೋಕದವರ ಸಂಗಡ ನಾಶವಾಗುತ್ತಿದ್ದನು.

ದೇವರು ನೋಹನೊಂದಿಗೆ ತಾನೊಂದು ಒಡಂಬಡಿಕೆಯನ್ನು ಮಾಡಿಕೊಳ್ಳುವುದಾಗಿ ಹೇಳುತ್ತಾನೆ. ಒಬ್ಬನು ತಾನು ಏನು ಮಾಡುತ್ತೇನೆಂದು ಹೇಳುತ್ತಾನೋ ಅದಕ್ಕೆ ಮನ್ನಣೆ ಕೊಡುವ ಉದ್ದೇಶವನ್ನು ಆ ಪದವೇ

ಸೂಚಿಸುತ್ತದೆ. ಇದು ಕೇವಲ ಮನಸ್ಸಿಗೆ ಬಂದಂತೆ ಏನಾದರೊಂದನ್ನು ನುಡಿದ ಹೇಳಿಕೆಯಲ್ಲ. ಇದು ಬದ್ಧತೆಯ ಪದವಾಗಿದೆ. ಒಂದು ವೇಳೆ ದೇವರು ನೋಹನೊಂದಿಗೆ– "ನೋಡು! ಲೋಕವು ದೊಡ್ಡಜಲಪ್ರಳಯದಿಂದ ನಾಶವಾಗುತ್ತದೆ. ನಾನು ನಿನ್ನನ್ನು ರಕ್ಷಿಸುತ್ತೇನೋ ಅಥವಾ ಇಲ್ಲವೋ ಎಂದು ಹೇಳಿದ್ದರೆ ಮತ್ತು ನೀನು ಇಷ್ಟರಲ್ಲಿ ಅದನ್ನು ಮಾಡು ಇಲ್ಲವೇ ಇದನ್ನು ಮಾಡು ನಂತರ ಏನಾಗುತ್ತದೋ ನೋಡೋಣ, ನಾನು ಯಾವುದನ್ನು ಖಾತ್ರಿಯಾಗಿ ಹೇಳುವುದಿಲ್ಲ ಎಂಬ ಹೇಳಿಕೆಗಳು ಆಶ್ವಾಸನೆ ಮತ್ತು ಭರವಸೆ ತುಂಬಿರುವ ಒಡಂಬಡಿಕೆ ಪದದಲ್ಲಿ ಸಿಗಲಾರದು.

**ಮಂಗಳವಾರ** **ಏಪ್ರಿಲ್ 6**

## ಅಬ್ರಾಮನೊಂದಿಗೆ ಒಡಂಬಡಿಕೆ

"ನಿನ್ನನ್ನು ಹರಸುವವರನ್ನು ಹರಸುವೆನು; ನಿನ್ನನ್ನು ಶಪಿಸುವವರನ್ನು ಶಪಿಸುವೆನು. ನಿನ್ನ ಮೂಲಕ ಭೂಲೋಕದ ಎಲ್ಲಾ ಕುಲದವರಿಗೂ ಆಶೀರ್ವಾದ ಉಂಟಾಗುವುದು ಎಂದು ಹೇಳಿದನು" (ಆದಿಕಾಂಡ 12:3).

ಆದಿಕಾಂಡ 12:1–3 ಓದಿರಿ. ದೇವರು ಅಬ್ರಾಮನಿಗೆ ಮಾಡಿದ ವಾಗ್ದಾನಗಳನ್ನು ಪಟ್ಟಿ ಮಾಡಿರಿ.

ಈ ವಾಗ್ದಾನಗಳ ಮಧ್ಯೆದಲ್ಲಿ ದೇವರು ಅಬ್ರಾಮನಿಗೆ ನಿನ್ನ ಮೂಲಕ ಭೂಲೋಕದ ಎಲ್ಲಾ ಕುಲದವರಿಗೂ ಆಶೀರ್ವಾದ ಉಂಟಾಗುವುದು ಎಂದು ಹೇಳುವುದನ್ನು ಗಮನಿಸಿರಿ (ಆ.ಕಾಂಡ 12:3). ಹಾಗೆಂದರೆ ಅರ್ಥವೇನು? ಅಬ್ರಾಮನ ಮೂಲಕ ಭೂಲೋಕದ ಎಲ್ಲಾ ಕುಲದವರಿಗೂ ಆಶೀರ್ವಾದ ಹೇಗೆ ಆಗುತ್ತದೆ? ಗಲಾತ್ಯ 3:6–9 ವಚನಗಳನ್ನು ನೋಡಿರಿ. ಆರಂಭದ ಈ ವಾಗ್ದಾನದಲ್ಲಿ ಯೇಸುಕ್ರಿಸ್ತನ ವಾಗ್ದಾನವನ್ನು ಯಾವ ರೀತಿಯಲ್ಲಿ ನೋಡುವಿರಿ? (ಗಲಾತ್ಯ 3:29ನ್ನು ನೋಡಿರಿ).

ದೇವರು ಅಬ್ರಾಮನಿಗೆ ಮಾಡಿದ ಮೊಟ್ಟಮೊದಲು ದಾಖಲಾಗಿರುವ ಪ್ರಕಟನೆ ಇದಾಗಿದೆ. ದೇವರು ಅವನೊಂದಿಗೆ ಶಾಶ್ವತ ಸಂಬಂಧ ಪ್ರವೇಶಿಸಲು ವಾಗ್ದಾನ ಮಾಡಿದನು. ದೇವರು ಅಬ್ರಾಮನಿಗೆ ಮಾಡಿದ ಒಡಂಬಡಿಕೆಅ ನೇರವಾದ

ಉಲ್ಲೇಖಗಳು ನಂತರ ಬಂದವು (ಆ.ಕಾಂಡ 15:4–21) (ಆ.ಕಾಂಡ 17:1–14). ದೇವರು ಒಂದ ಮಹತ್ವದ ದೈವೀಕ–ಮಾನವ ಸಂಬಂಧವನ್ನು ನೀಡಿದನು. 'ನಾನು' ಎಂಬ ಪದವು ಪುನರಾವರ್ತಿತವಾಗಿರುವುದು ದೇವರು ಮಾಡಿಕೊಂಡ ವಾಗ್ದಾನದ ಮಹತ್ವವನ್ನು ಸೂಚಿಸುತ್ತದೆ.

ಇದರೊಂದಿಗೆ ಅಬ್ರಾಮನು ಒಂದು ಪರೀಕ್ಷೆಗೆ ಒಳಪಡುವ ಆಜ್ಞೆಯನ್ನು ಪಡೆದುಕೊಂಡನು; ಹೊರಟುಹೋಗು ಎಂದು ಆಜ್ಞಾಪಿಸಿದಾಗ ಅವನು ನಂಬಿಕೆಯಿಂದ ವಿಧೇಯನಾದನು (ಇಬ್ರಿಯ 11:8). ಆತನು ವಿಧೇಯನಾದದು ಆಶೀರ್ವಾದಗಳು ತನಗುಂಟಾಗಲೀ ಎಂಬುದಕ್ಕಲ್ಲ. ಆತನು ತೋರಿಸಿದ ವಿಧೇಯತೆ ಆತನು ಪ್ರೀತಿಯ ಸಂಬಂಧದ ವಿಷಯದಲ್ಲಿ ಹೊಂದಿದ್ದ ನಂಬಿಕೆಗೆ ತೋರಿದ ಪ್ರತಿಕ್ರಿಯೆಯಾಗಿದೆ. ಇದನ್ನೇ ಇನ್ನೊಂದು ರೀತಿ ಹೇಳುವುದಾದರೆ ಅಬ್ರಾಮನು ಆಗಲೇ ದೇವರಲ್ಲಿ ನಂಬಿಕೆ ಇಟ್ಟಿದ್ದನು. ಆಗಲೇ ದೇವರಲ್ಲಿ ಭರವಸವಿಟ್ಟಿದ್ದನು, ದೇವರ ವಾಗ್ದಾನಗಳ ಮೇಲೆ ಅವನಿಗೆ ಆಗಲೇ ನಂಬಿಕೆ ಇತ್ತು. ಆತನು ಹಾಗಿದ್ದುದರಿಂದಲೇ ಎಲ್ಲವನ್ನು ಬಿಟ್ಟು ಗೊತ್ತಿಲ್ಲದ ಸ್ಥಳಕ್ಕೆ ನಡೆದನು. ಆತನ ವಿಧೇಯತೆ ಆತನಲ್ಲಿದ್ದ ನಂಬಿಕೆಯನ್ನು ಮನುಷ್ಯರಿಗೆ ಮತ್ತು ದೇವದೂತರಿಗೆ ಪ್ರಕಟಪಡಿಸಿತು.

ಅಬ್ರಾಮನು ಅದಕ್ಕಿಂತಲೂ ಮೊದಲೇ ನಂಬಿಕೆಗೂ ಮತ್ತು ಕ್ರಿಯೆಗೂ ಇರುವ ಮುಖ್ಯಸಂಬಂಧವನ್ನು ಪ್ರಕಟಪಡಿಸಿದನು. ನಾವು ನಂಬಿಕೆಯಿಂದ ಆದರೆ ವಿಧೇಯತೆಯನು ಪ್ರವರ್ತಿಸುವ ನಂಬಿಕೆಯಿಂದ ರಕ್ಷಿಸಲ್ಪಟ್ಟಿದ್ದೇವೆ. ರಕ್ಷಣೆಯ ವಾಗ್ದಾನವು ಮೊದಲು ಬರುತ್ತದೆ. ನಂತರ ಕ್ರಿಯೆಗಳು ಬರುತ್ತವೆ. ವಿಧೇಯತೆ ಇಲ್ಲದಿದ್ದರೆ ಒಡಂಬಡಿಕೆಯ ಸಂಬಂಧವಿರುವುದಿಲ್ಲ (ಅನ್ಯೋನ್ಯತೆ). ವಿಧೇಯತೆ ಇಲ್ಲದೆ ಯಾವ ಆಶೀರ್ವಾದವೂ ಇಲ್ಲ. ವಿಧೇಯತೆ ಎಂಬುದು ದೇವರು ಈಗಾಗಲೇ ಮಾಡಿರುವುದಕ್ಕೆ ನಂಬಿಕೆಯ ಪ್ರತಿಕ್ರಿಯೆ ತೋರಿಸುವುದೇ ಆಗಿದೆ.

ಆದಿಕಾಂಡ 15:6ನ್ನು ಓದಿರಿ. ಯಾವ ರೀತಿಯಲ್ಲಿ ಈ ವಚನವು ಎಲ್ಲಾ ಒಡಂಬಡಿಕೆಯ ವಾಗ್ದಾನಗಳಿಗೆ ಅಸ್ತಿವಾರವಾಗಿದೆ? ಯಾಕೆ ಈ ಆಶೀರ್ವಾದವು ಎಲ್ಲದಕ್ಕಿಂತಲೂ ಬಹಳ ಅಮೂಲ್ಯವಾಗಿದೆ?

ಬುಧವಾರ ಏಪ್ರಿಲ್ 7

## ಮೋಶೆಯೊಂದಿಗೆ ಒಡಂಬಡಿಕೆ

ವಿ.ಕಾಂಡ 6:1–8ನ್ನು ಓದಿರಿ. ನಂತರ ಈ ಪಶ್ನೆಗಳಿಗೆ ಉತ್ತರಿಸಿರಿ:

1) ದೇವರು ಯಾವ ಒಡಂಬಡಿಕೆಯ ಬಗ್ಗೆ ಮಾತಾಡುತ್ತಿದ್ದಾನೆ (ಆ.ಕಾಂಡ 12:1–3ನ್ನು ನೋಡಿರಿ).
2) ಇಸ್ರಾಯೇಲ್ಯರಿಗೆ ಉಂಟಾದ ವಿಮೋಚನೆಯು ಹೇಗೆ ಒಡಂಬಡಿಕೆ ವಾಗ್ದಾನಗಳ ನೆರವೇರಿಕೆಯಾಗಿದೆ?
3) ಇಲ್ಲಿ ಜನರಿಗೆ ದೇವರು ಏನನ್ನು ವಾಗ್ದಾನ ಮಾಡಿದನೋ ಮತ್ತು ಜಲಪ್ರಳಯಕ್ಕೂ ಮುಂಚೆ ನೋಹನೊಂದಿಗೆ ಯಾವ ವಾಗ್ದಾನ ಮಾಡಿದನೋ ಆ ವಾಗ್ದಾನಗಳಲ್ಲಿ ಏನು ಸಾಮ್ಯವಿದೆ?

ಐಗುಪ್ತದೇಶದಿಂದ ಬಿಡುಗಡೆಯಾದ ನಂತರ ಇಸ್ರಾಯೇಲ್ಯ ಜನರು ಸಿನಾಯಿ ಬೆಟ್ಟದಲ್ಲಿ ಒಡಂಬಡಿಕೆಯನ್ನು ದಾಸತ್ವದಿಂದ ಬಿಡುಗಡೆ ಹೊಂದಿದ ಸಂದರ್ಭದಲ್ಲಿ ಪಡೆದುಕೊಂಡರು (ವಿ.ಕಾಂಡ 20:2). ಇದು ದೇವರು ದೋಷಪರಿಹಾರಕ್ಕಾಗಿ ಮತ್ತು ಪಾಪ ಕ್ಷಮಾಪಣೆಗೆ ಮಾಡಿದ ಏರ್ಪಾಟನ್ನು ಒಳಗೊಂಡಿದ್ದವು. ಆದುದರಿಂದ ಎಲ್ಲಾ ಒಡಂಬಡಿಕೆಗಳಂತೆಯೇ ಕೃಪೆಯ ಒಡಂಬಡಿಕೆಯ ಮೂಲಕ ದೇವರು ತನ್ನ ಕೃಪೆಯನ್ನು ಜನರಿಗೆ ವಿಸ್ತರಿಸಿದನು.

ಈ ಒಡಂಬಡಿಕೆಯು ಬಹಳಷ್ಟು ರೀತಿಯಲ್ಲಿ ಅಬ್ರಹಾಮನೊಟ್ಟಿಗೆ ಆದ ಒಡಂಬಡಿಕೆಯನ್ನು ಪುನರಾವರ್ತಿಸಿದೆ.

1) ಇದು ದೇವರು ತನ್ನ ಜನರೊಂದಿಗೆ ತೋರುವ ವಿಶೇಷವಾದ ಸಂಬಂಧವಾಗಿದೆ (ಆ.ಕಾಂಡ 17:7,8ನ್ನು ವಿ.ಕಾಂಡ 19:5,6ಕ್ಕೆ ಹೋಲಿಸಿ ನೋಡಿರಿ).
2) ಅವರು ದೊಡ್ಡ ಜನಾಂಗವಾಗುವರು. ಆ.ಕಾಂಡ 12:2ನ್ನು ವಿ.ಕಾಂಡ 19:6ರ ಜೊತೆ ಹೋಲಿಸಿ ನೋಡಿರಿ.
3) ವಿಧೇಯತೆ ಅಗತ್ಯವಾಗಿತ್ತು (ಆ.ಕಾಂಡ 17:9–14 ಮತ್ತು ಆ.ಕಾಂಡ 22:16–18ನ್ನು ವಿ.ಕಾಂಡ 19:5ರ ಜೊತೆ ಹೋಲಿಸಿ ನೋಡಿರಿ).

ಇಲ್ಲಿರುವ ಕ್ರಮವನ್ನು ಗಮನಿಸಿರಿ. ದೇವರು ಮೊದಲು ಇಸ್ರಾಯೇಲ್ಯರನ್ನು ರಕ್ಷಿಸಿದನು ನಂತರ ಕೈಕೊಂಡು ನಡೆಯುವುದಕ್ಕೆ ಅವರಿಗೆ ಧರ್ಮಶಾಸ್ತ್ರ ಕೊಟ್ಟನು. ಇದೇ ಕ್ರಮವು ಸತ್ಯವೇದದಲ್ಲಿ ಸತ್ಯವಾಗಿದೆ. ಯೇಸುಕ್ರಿಸ್ತನು ನಮ್ಮನ್ನು ಪಾಪದಿಂದ ರಕ್ಷಿಸಿದನು (ಯೋಹಾನ 1:29, 1 ಕೊರಿಂಥ 15:3, ಗಲಾತ್ಯ 1:4ನ್ನು ನೋಡಿರಿ). ನಂತರ ಆತನು ನಮ್ಮ ಮಧ್ಯದಲ್ಲಿ ತನ್ನ ಧರ್ಮಶಾಸ್ತ್ರವನ್ನು ನಡೆದು ತೋರಿಸಿದನು. (ಗಲಾತ್ಯ 2:20; ರೋಮನ್ಸ್ 4:25, 8:1–3, 1 ಪೇತ್ರ 2:24)– ಎಸ್.ಡಿ.ಎ ಸತ್ಯವೇದ ವ್ಯಾಖ್ಯಾನ. ಸಂಪುಟ 1, ಪುಟ 602.

ವಿ.ಕಾಂಡ 6:7ನ್ನು ಓದಿರಿ. ಇಲ್ಲಿ ಮೊದಲ ಭಾಗವಾಗಿ ಬರುವ ಒಂದು ವಿಷಯ ಯಾವುದು. ಇಲ್ಲಿ ದೇವರು ಇವರು ನನ್ನ ಜನರು ನಾನು ಇವರ ದೇವರು ಹೇಳುತ್ತಾನೆ? ಇಲ್ಲಿರುವ ಕ್ರಿಯಾಶೀಲತೆಯನ್ನು ನೋಡಿರಿ. ಅವರು ದೇವರಿಗೆ ಏನೋ ಒಂದು ಆಗಿದ್ದಾರೆ ಮತ್ತು ದೇವರು ಅವರಿಗೆ ಏನೋ ಒಂದು ಆಗಿದ್ದಾನೆ. ದೇವರು ತನ್ನನ್ನು ಅವರಿಗೆ ವಿಶೇಷವಾಗಿ ಸಂಬಂಧ ಪಡಿಸುಕೊಳ್ಳುವುದು ಮಾತ್ರವಲ್ಲ ಅವರೂ ಸಹ ತಮ್ಮನ್ನು ವಿಶೇಷವಾಗಿ ಸಂಬಂಧಪಡಿಸಿಕೊಳ್ಳುವುದು ದೇವರಿಗೆ ಬೇಕಾಗಿತ್ತು. ದೇವರು ಇಂದು ನಿಮ್ಮೊಡನೆ ಅದೇ ತೆರನಾದ ಸಂಬಂಧವನ್ನು ಹೊಂದಲು ಬಯಸುತ್ತಾನಲ್ಲವೆ? ವಿ.ಕಾಂಡ 6:7ನೇ ವಚನದ ಮೊದಲಭಾಗದಲ್ಲಿರುವುದು ದೇವರೊಂದಿಗಿನ ನಿಮ್ಮ ಸಂಬಂಧವನ್ನು ಬಿಂಬಿಸುತ್ತದೆಯೇ? ಅಥವಾ ನಿಮ್ಮದು ಸಭೆಯ ಪುಸ್ತಕದಲ್ಲಿ ಉಳಿದಿರುವ ಹೆಸರು ಮಾತ್ರವಾಗಿದೆಯೇ?

ಪ್ರಶ್ನೆಯ ಮೊದಲ ಭಾಗಕ್ಕೆ ನೀವು ಹೌದು ಎಂದು ಉತ್ತರ ಕೊಡುವುದಾದರೆ ಯಾಕೆ ಎಂದು ಕಾರಣಗಳನ್ನು ಕೊಡಿರಿ.

**ಗುರುವಾರ** **ಏಪ್ರಿಲ್ 8**

## **ಹೊಸ ಒಡಂಬಡಿಕೆ** (ಯೆರೆ 31:31–33)

ಈ ವಚನಗಳು ಮೊದಲ ಸಲ ಹಳೆಯ ಒಡಂಬಡಿಕೆಯಲ್ಲಿ ಯಾವುದನ್ನು ಹೊಸ ಒಡಂಬಡಿಕೆ ಎಂದು ಹೇಳಲಾಗಿದೆಯೋ ಅದನ್ನು ಸೂಚಿಸುತ್ತವೆ. ಇಸ್ರಾಯೇಲ್ಯರು ಬಿಡುಗಡೆ ಹೊಂದಿ ಹಿಂದಿರುಗಿ ಬರುವ ಸಂದರ್ಭದಲ್ಲಿ ಈ

ಪದವು ಉಪಯೋಗಿಸಲ್ಪಟ್ಟಿದೆ. ಇದು ಇಸ್ರಾಯೇಲ್ಯರು ದೇವರಿಂದ ಪಡೆದುಕೊಳ್ಳುವ ಆಶೀರ್ವಾದಗಳ ಬಗ್ಗೆ ಹೇಳುತ್ತದೆ.

ಪುನಃ, ಎಲ್ಲಾ ಇನ್ನಿತರೆ ನಿದರ್ಶನಗಳಂತೆಯೇ ದೇವರು ಒಡಂಬಡಿಕೆ ಮೊದಲ ಹೆಜ್ಜೆ ಇಟ್ಟನು, ನಂತರ ಅದನ್ನು ತನ್ನ ಕೃಪೆಯಿಂದಲೇ ನೆರವೇರಿಸುವವನೂ ಆತರೇ ಆಗಿದ್ದಾನೆ.

ಇಲ್ಲಿ ಬಳಸಿರುವ ಭಾಷೆಯನ್ನು ಗಮನಿಸಿರಿ. ದೇವರು ತನ್ನನ್ನು ಇಸ್ರಾಯೇಲ್ಯರಿಗೆ ಪತಿಯಾಗಿದ್ದೇನೆಂದು ಹೇಳಿಕೊಳ್ಳುತ್ತಾನೆ. ತನ್ನ ಧರ್ಮಶಾಸ್ತ್ರವನ್ನು ಅವರ ಹೃದಯದಲ್ಲಿಡುತ್ತೇನೆಂಬುದಾಗಿ ಹೇಳುತ್ತಾನೆ. ಅಬ್ರಹಾಮನೊಂದಿಗೆ ಮಾಡಿಕೊಂಡ ಒಡಂಬಡಿಕೆಯ ಭಾಷೆಯಲ್ಲಿ ಮಾತಾಡುತ್ತಾನೆ.

ದೇವರು ಅವರಿಗೆ ನಾನು ನಿಮ್ಮ ದೇವರಾಗಿರುತ್ತೇನೆ ಮತ್ತು ನೀವು ನನ್ನ ಪ್ರಜೆಗಳಾಗಿರುವರಿ ಎಂದು ಹೇಳುತ್ತಾನೆ. ಆದುದರಿಂದ ಮೊದಲ ಒಡಂಬಡಿಕೆಯಂತೆ ಇದು ಒಂದು ಕಾನೂನಾತ್ಮಕ ಒಪ್ಪಂದವಾಗಿರಲಿಲ್ಲ. ಇದು ಒಂದು ದೊಡ್ಡ ರೀತಿಯಲ್ಲಿ ನಡೆಸುವ ವ್ಯವಹಾರವಾಗಿದೆ.

ಯೆರೆಮೀಯ 31:33ನ್ನು ಓದಿರಿ. ಇದನ್ನು ವಿಮೋಚನಕಾಂಡ 6:7ರ ಜೊತೆ ಹೋಲಿಕೆ ಮಾಡಿರಿ. ಇದು ಇಸ್ರಾಯೇಲ್ಯರ ಜೊತೆ ಮಾಡಿಕೊಂಡ ಒಡಂಬಡಿಕೆಯ ಸವಿವರವಾದ ಭಾಗವಾಗಿದೆ. ಮತ್ತೆ ಇಲ್ಲಿ ಬರುವ ಮುಖ್ಯವಾದ ಅಂಶವು ಯಾವುದು? ದೇವರು ತನ್ನ ಜನರೊಂದಿಗೆ ಏನು ಮಾಡಬೇಕೆಂದು ಬಯಸುತ್ತಾನೆ?

ಯೆರೆಮೀಯ 31:34ನ್ನು ಓದಿರಿ. ಇದನ್ನು ಯೋಹಾನ 17:3ರಲ್ಲಿರುವ ವಚನಕ್ಕೆ ಏನು ಹೇಳುತ್ತದೆಯೆಂದು ಹೋಲಿಸಿ ನೋಡಿರಿ. ಈ ಸಂಬಂಧಕ್ಕಾಗಿ ಅಗತ್ಯವಾದ ಅಸ್ತಿವಾರವನ್ನು ಕಟ್ಟಲು ಮುಖ್ಯವಾದ ಯಾವುದನ್ನು ಮಾಡುತ್ತಾನೆ?

ಯೆರೆಮೀಯ 31:31–34 ರಲ್ಲಿ ಮುಂಚಿನ ಒಡಂಬಡಿಕೆಗಳಂತೆಯೇ ಇಲ್ಲೂ ಸಹಾ ಒಬ್ಬನು ಕೃಪೆ ಮತ್ತು ವಿಧೇಯತೆಯ ಅಂಶಗಳನ್ನು ನೋಡಬಹುದಾಗಿದೆ. ದೇವರು ಅವರ ಪಾಪಗಳನ್ನು ಕ್ಷಮಿಸುತ್ತಾನೆ. ದೇವರು ಅವರೊಂದಿಗೆ ಸಂಬಂಧ

ಮಾಡಲು ಪ್ರವೇಶಿಸುತ್ತಾನೆ ಮತ್ತು ದೇವರು ತನ್ನ ಕೃಪೆಯನ್ನು ಅವರ ಜೀವಿತಕ್ಕೆ ಅನುಗ್ರಹಿಸುತ್ತಾನೆ. ಅದರ ಫಲಿತಾಂಶವಾಗಿ ಜನರು ಸುಮ್ಮನೆ ಆತನಿಗೆ ವಿಧೇಯರಾಗಿರುತ್ತಾರೆ. ಯಾಂತ್ರಿಕವಾಗಿಯಲ್ಲ. ಆದರೆ ಅವರು ಆತನನ್ನು ಅರಿತವರಾದುದರಿಂದ, ಆತನನ್ನು ಪ್ರೀತಿಸುವರಾದುದರಿಂದ ಮತ್ತು ಆತನನ್ನು ಸೇವಿಸಲು ಬಯಸುವುದರಿಂದ ದೇವರು ಜನರಿಂದ ನಿರೀಕ್ಷಿಸುವ ಒಡಂಬಡಿಕೆಯ ಸಂಬಂಧಕ್ಕೆ ಅಗತ್ಯವಾದ ಸಾರವನ್ನು ಇಲ್ಲಿ ಸೆರೆಹಿಡಿಯಲಾಗಿದೆ.

ಆಜ್ಞೆಗಳನ್ನು ಹೃದಯದಲ್ಲಿ ಬರೆಯುವ ಆಲೋಚನೆಯನ್ನು ನೀವು ಹೇಗೆ ಅರ್ಥಮಾಡಿಕೊಳ್ಳುವಿರಿ? ಆಜ್ಞೆಗಳನ್ನು ಹೃದಯದಲ್ಲಿ ಬರೆಯುವಾಗ ಅದು ವಸ್ತುನಿಷ್ಠವಾಗುತ್ತದೆಯೆಂದೂ, ವೈಯಕ್ತಿಕವಾಗಿ ಒಬ್ಬ ವ್ಯಕ್ತಿಯ ಸ್ವಭಾವದ ಪ್ರಕಾರ ಅನ್ವಯ ಮಾಡಬಹುದೆಂದು ಅರ್ಥಕೊಡುತ್ತದೆಯೆ? ಅಥವಾ ಬೇರೇನಾದರೂ ಅರ್ಥಕೊಡುತ್ತದೆಯೇ? ಹಾಗಿದ್ದರೆ ಏನು?

**ಶುಕ್ರವಾರ** **ಏಪ್ರಿಲ್ 7**

**ಹೆಚ್ಚಿನ ಚಿಂತನೆಗಾಗಿ :** ಎಲೆನ್ ಜಿ ವೈಟಮ್ಮನವರ ನಮ್ಮ ಪಿತೃಗಳು ಮತ್ತು ಪ್ರವಾದಿಗಳು ಪುಸ್ತಕದಲ್ಲಿ 'ಕಾನಾನಿನಲ್ಲಿ ಅಬ್ರಹಾಮ' ಅಧ್ಯಾಯ ಪುಟ 132–138 ಮತ್ತು 'ದೇವರ ಪ್ರವಾದಿಗಳು ಸಹಾಯ ಮಾಡುತ್ತಾರೆ' ಪುಟ 569–571.

"ನಮ್ಮನ್ನು ಸೇವೆಗೆ ಬಂಧಿಸುವ ನೊಗವು ಯಾವುದೆಂದರೆ ದೇವರ ಧರ್ಮಶಾಸ್ತ್ರ ಮಹಾಪ್ರೀತಿಯ ನ್ಯಾಯಪ್ರಮಾಣ ಏದೇನಿನಲ್ಲಿ ಪ್ರಕಟವಾಯಿತು. ಸಿನಾಯಿಯಲ್ಲಿ ಘೋಷಿಸಲ್ಪಟ್ಟಿತು ಮತ್ತು ಹೊಸ ಒಡಂಬಡಿಕೆಯು ಹೃದಯದಲ್ಲಿ ಬರೆಯಲ್ಪಟ್ಟಿತು. ನಾವು ನಮ್ಮ ಮನಸ್ಸಿಗೆ ಬಂದಂತೆ ನಡೆದುಕೊಳ್ಳಲು ಅವಕಾಶಕೊಟ್ಟರೆ ನಾವು ಸೈತಾನನ ಬಲೆಗೆ ಸಿಕ್ಕಿ ಬೀಳುತ್ತೇವೆ. ನಾವು ಕೂಡ ಆತನ ಸ್ವಭಾವಗಳನ್ನು ಹೊಂದಿಕೊಳ್ಳುತ್ತೇವೆ. ಆದುದರಿಂದ ನಮ್ಮನ್ನು ಉನ್ನತವಾದ ಉದಾತ್ತವಾದ ಮತ್ತು ಮೇಲೆತ್ತುವ ಚಿತ್ತಕ್ಕೆ ದೇವರು ನಮ್ಮನ್ನು ಪರಿಮಿತಿಗೊಳಿಸುತ್ತಾನೆ. ನಾವು ಬುದ್ಧಿಪೂರ್ವಕವಾಗಿ, ಸಹನೆಯಿಂದ ಸೇವೆಯ ಕರ್ತವ್ಯಗಳನ್ನು ನಿರ್ವಹಿಸಬೇಕೆಂದು ಬಯಸುತ್ತಾನೆ. ಕ್ರಿಸ್ತನು ತಾನಾಗಿ ಸೇವೆಯ ನೊಗವನ್ನು ಮಾನವನಾಗಿ ಹೊತ್ತುಕೊಂಡನು. ಕ್ರಿಸ್ತನು ದೇವರನ್ನು ಕುರಿತು "ನನ್ನ ದೇವರೇ

ನಿನ್ನ ಚಿತ್ತವನ್ನು ಅನುಸರಿಸುವುದೇ ನನ್ನ ಸಂತೋಷವು, ನಿನ್ನ ಧರ್ಮೋಪದೇಶವು ನನ್ನ ಅಂತರಂಗದಲ್ಲಿದೆ ಎಂದು ಹೇಳುತ್ತಾನೆ' (ಕೀರ್ತ 40:8).

ನನ್ನ ಚಿತ್ತದಂತೆ ನಡೆಯುವುದಕ್ಕಾಗಿ ನಾನು ಬಂದಿಲ್ಲ. ನನ್ನನ್ನು ಕಳುಹಿಸಿದಾತನ ಚಿತ್ತವನ್ನೇ ನೆರವೇರಿಸುವುದಕ್ಕೆ ಪರಲೋಕದಿಂದ ಬಂದೆನು (ಯೋಹಾನ 6:38). ದೇವರ ಮೇಲಿರುವ ಪ್ರೀತಿ, ಆತನ ಮಹಿಮೆಗಾಗಿರುವ ಹುರುಪು ಮತ್ತು ಬಿದ್ದುಹೋದ ಮನುಷ್ಯನ ಮೇಲಿನ ಪ್ರೀತಿ ಯೇಸುಕ್ರಿಸ್ತನನ್ನು ಭೂಮಿಗೆ ಸಂಕಟಪಡುವುದಕ್ಕೂ ಸಾಯುವುದಕ್ಕೂ ತಂದಿತು. ಇದು ಅವನ ಜೀವವನ್ನು ನಿಯಂತ್ರಿಸುವ ಶಕ್ತಿಯಾಗಿದೆ. ಈ ನಿಯಮವನ್ನೇ ನಾವು ಅಳವಡಿಸಿಕೊಳ್ಳಬೇಕೆಂದು ನಮ್ಮನ್ನು ಕರೆಯುತ್ತಾನೆ" – ಎಲೆನ್ ಜಿ ವೈಟಮ್ಮನವರ 'ಯುಗಯುಗಗಳ ಬಯಕೆ' ಪುಸ್ತಕದಲ್ಲಿ ಪುಟ 329–330.

## ಆರೋಗ್ಯದ ಲೇಖನಮಾಲೆ

### ಎರಡನೇ ವಾರ

### * ರಕ್ತಹೀನತೆ

**ರಕ್ತಹೀನತೆ ಎಂದರೇನು?**

ರಕ್ತದಲ್ಲಿ ಕಬ್ಬಿಣಾಂಶದ ಕೊರತೆ ಉಂಟಾಗುವುದು. ಈ ಕಾರಣದಿಂದ ರಕ್ತಹೀನತೆಯನ್ನು ತೆಳುರಕ್ತ ಎಂದು ಕರೆಯುವುದೂ ಉಂಟು. ಅಂದರೆ ಶರೀರದಲ್ಲಿ ಕೆಂಪು ರಕ್ತಕಣಗಳ ಅಥವಾ ಅವುಗಳ ಹಿಮೋಗ್ಲೋಬಿನ್ ಅಂಶದ ಕೊರತೆ ಉಂಟಾಗುವುದು. ಇದರಿಂದ ಕೆಲವೊಮ್ಮೆ ದೇಹ ಬಿಳಿಚಿಕೊಳ್ಳುತ್ತದೆ.

**ಗುರುತಿಸುವುದು ಹೇಗೆ?**

ಸ್ತ್ರೀಯರು ಮತ್ತು ಮಕ್ಕಳು ಮಣ್ಣು ಅಥವಾ ಇನ್ನಾವುದೇ ಕೊಳಕಾದ ವಸ್ತುಗಳನ್ನು ತಿಂದಲ್ಲಿ, ಅವರಲ್ಲಿ ರಕ್ತಹೀನತೆ ಇದೆಯೆಂದು ತಿಳಿಯಬಹುದು. ಕೈಬೆರಳಿನ ಉಗುರು ಬಿಳಿಯಾಗುವಿಕೆ, ಬಾಯಿ ವಸಡು ವಿವರ್ಣಗೊಳ್ಳುವುದು, ವ್ಯಕ್ತಿಯು ನಿಶ್ಶಕ್ತಿ ಅಥವಾ ಬೇಗನೆ ಆಯಾಸಗೊಳ್ಳುವುದು, ಮುಖ, ಕಾಲುಗಳಲ್ಲಿ ಊತ, ಹೃದಯಬಡಿತ ವೇಗವಾಗಿರುವುದು ಮತ್ತು ಕಣ್ಣುರೆಪ್ಪೆಗಳು ವಿವರ್ಣವಾಗಿರುವುದು.

**ಕಾರಣಗಳು:**

ಸಮತೋಲನ ಆಹಾರ ತೆಗೆದುಕೊಳ್ಳದ್ದರಿಂದ ರಕ್ತದಲ್ಲಿ ಕಬ್ಬಿಣಾಂಶ ಕೊರತೆ, ರಕ್ತಸ್ರಾವ ಅದರಲ್ಲಿಯೂ ಸ್ತ್ರೀಯರ ಮುಟ್ಟಿನ ಸಮಯದಲ್ಲಿ ಹೆಚ್ಚು ರಕ್ತ ಹೋಗುವುದು ಅಥವಾ ಅತಿಸಾರ (ಭೇದಿ).

**ಏನು ಮಾಡಬೇಕು?**

1. ದಟ್ಟಹಸಿರು ಹಸಿರು ತರಕಾರಿ, ಮೀನು ಮತ್ತು ಅವರೆ, ಹುರುಳಿ ಮೊದಲಾದ ದ್ವಿದಳ ಧಾನ್ಯಗಳನ್ನು ತಿನ್ನಬೇಕು.
2. ಎರಡು ತಿಂಗಳ ಕಾಲ ಮೀನೆಣ್ಣೆ ಉಪಯೋಗಿಸಬೇಕು.
3. ವೈದ್ಯರ ಸಲಹೆ ಪಡೆದುಕೊಳ್ಳಬೇಕು.

## * ಕಾಮಾಲೆ

**ಕಾಮಾಲೆ ಎಂದರೇನು?**

ಪಿತ್ತಜನಕಾಂಗದೊಳಗೆ ಉಂಟಾಗುವ ವೈರಸ್ ಸೂಕ್ಷ್ಮಜೀವಿಗಳ ಸೋಂಕು. ಯಕೃತ್ತು ಅಥವಾ ಪಿತ್ತಜನಕಾಂಗದ (ಲಿವರ್) ಊತ.

**ಕಂಡುಹಿಡಿಯುವುದು ಹೇಗೆ?**

* ಆರಂಭದಲ್ಲಿ ಸಣ್ಣದಾಗಿ ಜ್ವರ.
* ಕಣ್ಣುಗಳು ಹಳದಿ ಬಣ್ಣವಾಗುವಿಕೆ
* ಮಲವು ಬೆಳ್ಳಗಿರುವುದು
* ಮೂತ್ರವು ಕೋಕಾಕೋಲ ಅಥವಾ ಥಮ್ಸ್‌ಅಪ್‌ನಂತ ಬಣ್ಣದಲ್ಲಿರುವುದು.
* ಹಸಿವಾಗದಿರುವಿಕೆ ಮತ್ತು 2–10 ವಾರಗಳವರೆಗೆ ನಿಶ್ಶಕ್ತಿ.

**ಹೇಗೆ ಬರುತ್ತದೆ?**

ಮಾನವನ ಮಲದಿಂದ ಕಲುಷಿತವಾದ ಆಹಾರ ಅಥವಾ ನೀರು ಕುಡಿಯುವುದರಿಂದ, ಅಲ್ಲದೆ ಬೇರೆಯವರಿಗೆ ಕೊಟ್ಟ ಇಂಜೆಕ್ಷನ್ ಸೂಜಿಯನ್ನು ಬಿಸಾಡದೆ, ಅದರಲ್ಲಿಯೇ ಮತ್ತೊಬ್ಬರಿಗೆ ಇಂಜೆಕ್ಷನ್ ಕೊಡುವುದು ಮತ್ತು ಸೋಂಕಿನ ರಕ್ತ ತೆಗೆದುಕೊಳ್ಳುವುದರಿಂದ.

**ಏನು ಮಾಡಬೇಕು?**

* ಔಷಧ ತೆಗೆದುಕೊಳ್ಳಬಾರದು. ಮದ್ಯಪಾನ, ಧೂಮಪಾನ ಬೇಡ.
* ದಿನಕ್ಕೆ ನಾಲ್ಕು ಲೀಟರ್ ನೀರು ಕುಡಿಯಬೇಕು. ಕೊಬ್ಬಿನಾಂಶವುಳ್ಳ ಆಹಾರ ತೆಗೆದುಕೊಳ್ಳಬಾರದು. ಎಣ್ಣೆಪದಾರ್ಥ ಬೇಡ. ಸಾಕಷ್ಟು ಹಣ್ಣು–ಹಂಪಲು ತಿನ್ನಬೇಕು.